


ವಿಂಟೇಜ್ ಬೈಕ್‌ಗಳು

■ ಗೌರಮ್ಮ ಕಟ್ಟಿಮನಿ
ಚಿತ್ರಗಳು: ಗೋವಿಂದರಾಜ ಜವಳಿ

# ಮನೆಯೊಳಗೊಂದು ಮ್ಯೂಸಿಯಂ



ಬ್ರಿಟಿಷ್ ಪ್ಯಾನ್‌ಡಾನ್ ಕಾರ್

ಟಿಕ್...ಟಿಕ್...ಟಿಕ್...ಡಣ್..ಡಣ್..., ಕುಕೂ.. ಕುಕೂ...ಎನ್ನುವ ಸದ್ದು. ಮತ್ತೊಂದೆಡೆ ಹಿತವಾದ ಸಂಗೀತ, ಒಮ್ಮೆಲೆ ಕಣ್ಣ್ ಕುಕ್ಕುವಂತಹ ಹೊಳಪು, ನಿಶ್ಶಬ್ದ ಸೃಷ್ಟಿಸುವ ಗ್ರಾಮಾಫೋನ್. ಹಾಗೇ ಏಕಾಂತ ಭಾವ ಮೂಡಿಸುವ ಕ್ಯಾಂಡಲ್ ಲೈಟ್. ಕುತೂಹಲ ಕೆರಳಿಸುವ ಪೇಂಟಿಂಗ್ಸ್... ತರಹೇವಾರಿ ಆಕರ್ಷಕ ಹಳೆ ವಸ್ತುಗಳು.

ಇವನ್ನೆಲ್ಲ ನೋಡಬೇಕು ಅಂದ್ರೆ ನೀವು ಯಾವ್ದೋ ವಿದೇಶಿ ಮ್ಯೂಸಿಯಂಗೆ ಹೋಗಬೇಕಿಲ್ಲ. ಹಾಗಂತ ಇದು ಮ್ಯೂಸಿಯಂ ಕೂಡ ಅಲ್ಲ... ಹವ್ಯಾಸಕ್ಕೆಂದು ಮನೆಯಲ್ಲಿಯೇ ಸಂಗ್ರಹಿಸಿಟ್ಟಿರುವ ವಸ್ತುಗಳು!

ಬರೋಬ್ಬರಿ 600ಕ್ಕೂ ಹೆಚ್ಚು ವಿದೇಶಿ ಗಡಿಯಾರಗಳು, ಆಕರ್ಷಕ ಲ್ಯಾಂಪ್‌ಗಳು, ಅಲ್ಲಲ್ಲಿ ಅಂದವಾಗಿ ಜೋಡಿಸಿಟ್ಟ ಸೂಕ್ಷ್ಮ ಕೆತ್ತನೆಯ ಪುಟ್ಟ ಪ್ರತಿಮೆಗಳು, ಗ್ರಾಮಾಫೋನ್ ಹಾಗೂ ಸಿಲಿಂಡರ್ ಮ್ಯೂಸಿಕ್ ಬಾಕ್ಸ್‌ಗಳಷ್ಟೇ ಅಲ್ಲದೇ ಹತ್ತಕ್ಕೂ ಅಧಿಕ ವಿಂಟೇಜ್ ಬೈಕ್‌ಗಳು ಇಲ್ಲಿವೆ.

'ಜೀವನೋಪಾಯಕ್ಕಾಗಿ ಅಷ್ಟೇ ಅಲ್ಲ, ಆತ್ಮಸಂತೋಷಕ್ಕಾಗಿ ಮಾಡುವ ಕೆಲಸಗಳೇ ಹವ್ಯಾಸ' ಎಂದು ಬೀಚಿ ಹೇಳಿದ್ದಾರೆ. ಹೀಗೆ ಆತ್ಮ ಸಂತೋಷಕ್ಕಾಗಿ ವಿದೇಶಿ ವಸ್ತುಗಳನ್ನು ಸಂಗ್ರಹಿಸಿದವರು ಹುಬ್ಬಳ್ಳಿಯ ಉಣಕಲ್ ನಿವಾಸಿ ರಾಹುಲ್ ರೇಣಕೆ. ರಾಹುಲ್ 17 ವರ್ಷಗಳಿಂದ ವಿದೇಶಿ ಪುರಾತನ (ಆ್ಯಂಟಿಕ್ ಪೀಸ್) ವಸ್ತುಗಳನ್ನು ಸಂಗ್ರಹಿಸುವುದರಲ್ಲಿ ನಿರತರಾಗಿದ್ದಾರೆ.

ನೌಕಾಪಡೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ತಂದೆ